OS No. 39/2017

DW-1

**(ಇಂದು ದಿಃ 23-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಮುಂದುವರೆದ ಪಾಟೀ ಸವಾಲುಃ- ಶ್ರೀ.NR ವಕೀಲರಿಂದಃ-**

ವಾದಿ ತಂದೆ ಹೆಸರು ನರಸರಡ್ಡಿ ಎಂದರೆ ಸರಿ. 1ನೇ ಪ್ರತಿವಾದಿ ವೇಂಕಟಯ್ಯ ನನ್ನ ಮುತ್ಯಾ ಎಂದರೆ ಸರಿ. ನಿಡಿ-39 ಯಾವ ದಿನ ಆಗಿದೆ ಹೇಳಲು ಆಗುವುದಿಲ್ಲ. ವಾದಿ ತಂದೆ ನರಸರಡ್ಡಿ 1ನೇ ಪ್ರತಿವಾದಿ ವಿರುದ್ದ AC ಕಚೇರಿಯಲ್ಲಿ ಅಪೀಲು ನಂಬರ 75/2013-14 ಸಲ್ಲಿಸಿದ್ದರು ಎಂದರೆ ಸರಿ. ಸದರಿ ಅಪೀಲುನಲ್ಲಿ 1ನೇ ಪ್ರತಿವಾದಿ ತಕಾರರು ಸಲ್ಲಿಸಿದ್ದರು . ಸದರಿ ತಕಾರರಿಲ್ಲಿ ಚಿನ್ನನರಸರಡ್ಡಿ ಅಂದರೆ ವಾದಿಯ ತಂದೆ ನರಸರಡ್ಡಿಯ ತಮ್ಮ ದಿನಾಂಕ 20.04.1971 ರಂದು ನೋಂದಣಿ ಇಲ್ಲದ ಖರೀದಿ ಪತ್ರ ಬರೆದುಕೊಟ್ಟಿದ್ದರು ಎಂದು ಹೇಳಿ ಬರೆಸಿದ್ದರು ಎಂದರೆ ಸರಿಯಲ್ಲ. ಸಾಕ್ಷಿಗೆ ಸದರಿ ತಕಾರಾರಿನ ದೃಡೀಕೃತ ನಕಲನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ 1ನೇ ಪ್ರತಿವಾದಿಯ ಸಹಿ ನೇಡಿ ಗುರುತಿಸಿದ್ದು ಸದರಿ ತಕರಾರನ್ನು ನಿಪಿ-39 ಎಂದು ಗುರುತಿಸಲಾಯಿತು. ನಿಡಿ-39 ಈ ಹಿಂದೆ ನನ್ನ ಮುತ್ಯಾ ನಿಡಿ-39 ರಲಿಲ ಹೇಳಿರುವ ದಿನಾಂಕ 20.04.1971 ರ ಖರೀದಿ ಪತ್ರ ಅಲ್ಲ ಎಂದರೆ ಸರಿಯಲ್ಲ. ನಿಡಿ-39 ರಲ್ಲಿ ದಿನಾಂಕ 19.07.1972 ರಂದು ಬರೆಯಲಾಗಿದೆ ಎಂದು ದಿನಾಂಕ ನಮೂದಾಗಿದೆ ಎಂದರೆ ಸರಿ. ನಿಡಿ-39 ನ್ನು ಈ ದಾವೆಗಾಗಿ ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. AC ಕಚೇರಿಯಲ್ಲ ನನ್ನ ಮುತ್ಯಾ ಹಾಜರುಪಡಿಸಿದ್ದರು ಎಂದು ಒಂದು ದಾಖಲಾತಿಯ ನಕಲನ್ನು ತೋರಿಸಲಾಗಿ ಅದನ್ನು ಹಾಜರುಪಡಿಸಿದ್ದರು ಎಂದು ಹೇಳಿದ್ದು ಸದರಿ ದಾಖಲಾತಿಯನ್ನು ನಿಪಿ-40 ಎಂದು ಗುರುತಿಸಲಾಯಿತು. ನಿಡಿ-39 ಅನ್ನು ಕೂಡ Ac ಕವಚೇರಿಯಲ್ಲಿ ಈ ಹಿಂದನಿ ನನ್ನ ಮುತ್ಯಾ ಹಾಜರುಪಡಿಸಿದ್ದರು ಆಗ ಅದರಲ್ಲಿ ದಿನಾಂಕ ನಮೂದಾಗಿರಲಿಲ್ಲ ಎಂದು ದಾಖಲಾತಿ ಒಂದ ನಕಲನ್ನು ತೋರಿಸಲಾಗಿ Mistake ಆಗಿರಬಹುದು ಎಂದು ಹೇಳಿದ್ದು ಸದರಿ ನಕಲನ್ನು ನಿಪಿ-41 ಎಂದು ಗುರುತಿಸಲಾಯಿತು. ನಿಪಿ-41 ರಲ್ಲಿ ದಿನಾಂಕ ಕೇವಲ 19 ಎಂದು ಮಾತ್ರ ನಮೂದಾಗಿದ್ದು ತಿಂಗಳು ಮತ್ತು ವರ್ಷ ನಮೂದಾಗಿಲ್ಲ ಎಂದರೆ ಸರಿ. ಈ ಎಲ್ಲಾ ದಾಖಲಾತಿಗಳನ್ನು 1ನೇ ಪ್ರತಿವಾದಿ ಸೃಷ್ಟಿ ಮಾಡಿದ್ದರು ಎಂದರೆ ಸರಿಯಲ್ಲ.

OS No. 39/2017
DW-1

ದಾವಾ ಜಮೀನನ್ನು ಚಿನ್ನ ನರಸರಡ್ಡಿ ಮಾರಾಟ ಮಾಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ಇವತ್ತಿನವರೆಗೂ ಚಿನ್ನ ನರಸರಡ್ಡಿ ಮತ್ತು ವಾದಿಯರು ಕಬ್ಜಾದಲ್ಲಿದ್ದಾರೆ ಎಂದರೆ ಸರಿಯಲ್ಲ, ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**